ಕರ್ನಾಟಕ ವಿಧಾನಸಭೆ

ಶುಕ್ರವಾರ ದಿನಾಂಕ 1ನೇ ಏಪ್ರಿಲ್, 2005ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 12 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು : ಈಗ ಪ್ರಶ್ನೋತ್ತರ. ಡಿ.ಆರ್. ಪಾಟೀಲ್‌ರವರು ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನೊಂದು ನಿಲುವಳಿ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು : ಒಂದೇ ಒಂದು ಪ್ರಶ್ನೆ ಇದೆ. ಅದು ಆದ ನಂತರ ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಗಬಹುದು.

ಅಧ್ಯಕ್ಷರು : ಡಿ.ಆರ್. ಪಾಟೀಲ್‌ರವರೆ, ಕೇಳಿ. ಅವರು ಇಲ್ಲ.

ಶ್ರೀ ಆಲ್ಕೋಡ್ ಹನುಮಂತಪ್ಪ : ಸಾರ್ ನನ್ನನೊಂದು ಶೂನ್ಯವೇಳೆಯಲ್ಲಿ ಇದೆ. ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ನಾನು ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆಗೆಂದು ಕರೆದರೆ, ನೀವು ನನ್ನದೊಂದು ನನ್ನದೊಂದು ಇದೆ ಎಂದರೆ ಇದು ಹೇಗೆ? ದಯಮಾಡಿ ಕುಳಿತುಕೊಳ್ಳಿ. ಇವತ್ತು ಕೊನೆಯದಿನ, ಆಮೇಲೆ ಕರೆಯುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಅರ್ಜಿಯನ್ನೊಪ್ಪಿಸುವುದು.

1. ಅರ್ಜಿಗಳನ್ನೊಪ್ಪಿಸುವುದು.

(ಅ) ಶ್ರೀ ಜಿ. ಕೃಷ್ಣಪಾಲೇಮಾರ್‌ರವರ ಅರ್ಜಿ.

ಸಭಾಧ್ಯಕ್ಷರು : ಮಂಗಳೂರು ತಾಲ್ಲೂಕು ಶಕ್ತಿನಗರ ನಾಲ್ಯಪದವು ಪ್ರದೇಶದಲ್ಲಿರುವ ಸರ್ಕಾರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರೌಢಶಾಲೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಶ್ರೀ ಜೀಕೃಷ್ಣಪಾಲೇಮಾರ್‌ರವರ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

(ಆ) ಶ್ರೀ ಸಿ.ಸಿ ಪಾಟೀಲ್‌ರವರ ಅರ್ಜಿ.

ಶ್ರೀ ಸಿ.ಸಿ. ಪಾಟೀಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಯಾವಗಲ್ಲ ಗ್ರಾಮದ 72 ಎಕರೆ ಜಮೀನಿಗೆ ನೀರು ಪೂರೈಸುವುದರ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೀದ್ದೇನೆ.